ಕಥೆ

# ಕೋನೇರಿ



**ಶ್ರೀಧರ ಪತ್ತಾರ**

ಕಲೆ: ರಾಮಕೃಷ್ಣ ಸಿದ್ರಪಾಲ

ಕೊನೇರಿ ಕಾಡಮಧ್ಯದ ಆ ಅರಣ್ಯ ಶಿಬಿರವನ್ನು ಮೊದಲ ಸಲ ನೋಡುತ್ತಿದ್ದೇನೇನೋ ಎಂಬಂತೆ ತದೇಕಚಿತ್ತದಿಂದ ದಿಟ್ಟಿಸುತ್ತ ನಿಂತಿದ್ದ. ಆ ಕಟ್ಟಡ ಸುಣ್ಣ ಬಣ್ಣ ಕಂಡು ಅದೆಷ್ಟು ವರ್ಷವಾಗಿತ್ತೋ. ಆಗಾಗ ಹೆಂಟೆಗಳನ್ನು ಉದುರಿಸುತ್ತಿದ್ದ ಕಲ್ಲುಮಣ್ಣಿನ ನಾಲ್ಕು ಗೋಡೆಗಳು, ಅದರ ಮೇಲೆ ಅಸಂಖ್ಯ ತೂತುಗಳ ಹೆಂಚಿನ ಮೇಲ್ಹಾವಣಿ, ಬಿದಿರ ಗಳಗಳನ್ನು ಹೆಣೆದು ಮಾಡಿದ್ದ ಬಾಗಿಲಲ್ಲದ ಬಾಗಿಲಿನ ಆ ಮುರುಕಲು ಶಿಬಿರದಲ್ಲಿ ಕೊನೇರಿ ಎರಡ್ಮೂರು ವರುಷ ಇದ್ದನೆಂಬುದೇ ಅವನಿಗೇ ಈಗ ನಂಬಲಾಗುತ್ತಿಲ್ಲ.

ಹಗಲೊತ್ತಾದರೆ ವನಪಾಲಕರೊಂದಿಗೆ ಕಾಡಿನ ಗಸ್ತು ಮಾಡಿಕೊಂಡು ಬರುತ್ತಿದ್ದ ಕೊನೇರಿಗೆ ಸಂಜೆಯಾದರೆ ಗೇಟು ಕಾಯುವ ಕೆಲಸ. ಅಂದರೆ ಸಂಜೆ ಆರಾಯ್ತೆಂದರೆ ಗೇಟಿಗೆ ನಿಂತು ಬೆಳಗ್ಗೆವರೆಗೂ ಖಾನಾಪುರದಿಂದ ಗೋವಾಕ್ಕೆ ತೆರಳುವ ವಾಹನಗಳು ಅರಣ್ಯ ಮಾರ್ಗವಾಗಿ ಹೋಗದಂತೆ ತಡೆದು ಪರ್ಯಾಯ ರಸ್ತೆಯನ್ನು ಬಳಸಿಕೊಂಡು ಹೋಗುವಂತೆ ನೋಡಿಕೊಳ್ಳುವುದು. ಮತ್ತು ಯಾವುದೇ ಮರ ಗಿಡ ಸೊಪ್ಪು ಸದೆಯಂತಹ ಅರಣ್ಯದ ಉತ್ಪನ್ನ ಅಕ್ರಮವಾಗಿ ಸಾಗಿಸದಂತೆ ಎಚ್ಚರವಹಿಸುವುದು. ದಿನವೂ ಆ ಮಾರ್ಗವಾಗಿ ಬರುವ ನೂರಾರು ವಾಹನಗಳನ್ನು ನಿಯಂತ್ರಿಸುವಲ್ಲಿ ಕೊನೇರಿಗೆ ಸಾಕುಸಾಕಾಗುತ್ತಿತ್ತು. ಸಮಯ ಹತ್ತಾಗಿ, ಹನ್ನೆರಡಾಗಿ ರಾತ್ರಿಯೇರಿ ಈಗ ವಾಹನಗಳ ಸಂಚಾರ ನಿಂತಿತು, ಆಗ ನಿಂತಿತು ಇನ್ನಾದರೂ ಹೋಗಿ ಮಲಗಬೇಕೆಂದು ಅಂದುಕೊಳ್ಳುತ್ತಿದ್ದರೆ ಅವನ ಲೆಕ್ಕಾಚಾರ ತಪ್ಪಿಸಲು ಯಾವುದೋ ಒಂದು ವಾಹನ ಗೇಟಿನಲ್ಲಿ ಪ್ರತ್ಯಕ್ಷವಾಗುತ್ತಿತ್ತು. ಆಗ ನಿರ್ವಾಹವಿಲ್ಲದೇ ಆ ವಾಹನದ ಡ್ರೈವರ್‌ನ ಗುರುತಿನ ಚೀಟಿ ಪರಿಶೀಲಿಸಿ, ವಾಹನದಲ್ಲಿದ್ದ ಮಾಲನ್ನು ತಪಾಸಿಸಿದ ನಂತರ ಅದು ಅಲ್ಲಿಂದ ಜಾಗಬಿಡೋವರೆಗೂ ಮತ್ತೊಂದು ಘಳಿಗೆ ಸಮಯ ಸಾಯುತ್ತಿತ್ತು. ಈ ಗದ್ದಲದಲ್ಲಿ ಕೊನೇರಿ ಒಮ್ಮೊಮ್ಮೆ ರಾತ್ರಿ ಊಟವನ್ನೇ ಮರೆಯುತ್ತಿದ್ದ. ಅದೆಷ್ಟೋ ಬಾರಿ ರಾಮೇವಾಡಿ ಖಾಜೇಬನ ಹೊಟೇಲ್‌ನಲ್ಲಿ ಕಟ್ಟಿಸಿಕೊಂಡು ಬಂದಿದ್ದ ಊಟದ ಪೊಟ್ಟಣ ಹಾಗೇ ಉಳಿದು ಮರುದಿನ ಯಾವುದೋ ಬಿಡಾಡಿ ನಾಯಿಯ ಹೊಟ್ಟೆ ಸೇರುತ್ತಿತ್ತು. ಒಮ್ಮೊಮ್ಮೆ ಯಾವ ವಾಹನವಿಲ್ಲದಿದ್ದಾಗ ಮಲಗಿದರೂ ನಿದ್ರೆ ಬರದಿದ್ದಕ್ಕೆ ಕೊನೇರಿ ಸುಮ್ಮನೇ ಮಗ್ಗಲು ಬದಲಿಸುತ್ತ ತೂತು ಹೆಂಚಿನ ಛಾವಣಿಯನ್ನೇ ದಿಟ್ಟಿಸುತ್ತ ಹೊತ್ತು ಹೊಂಡಿಸುತ್ತಿದ್ದ. ಹೀಗೆ ಅವನಿಗೆ ನಿದ್ರೆಯಿಲ್ಲದ ರಾತ್ರಿಗಳೆಷ್ಟೋ.

ಸದ್ಯ ಯಾವ ವಾಹನಗಳು ಇಲ್ಲವೆಂದು ಕೊನೇರಿ ಶಿಬಿರದೆದುರಿನ ಮೊಣಕಾಲೆತ್ತರದ ಕಟ್ಟೆಯ ಮೇಲೆ ಕುಳಿತ. ಅದುವರೆಗೂ ಸುರಿದ ಮಳೆಯೀಗ ವಿರಾಮ ತೆಗೆದುಕೊಂಡಿತ್ತು. ಶಿಬಿರದೆದುರಿನ ಕಾಡುನೇರಳೆ ಗಿಡದಿಂದ ಆಗೊಂದು ಈಗೊಂದು ಹನಿಗಳುದುರುತ್ತಿದ್ದವು. 'ಥೂ. ! ಈ ಮಳೆ ತೀರಾ ರೊಚ್ಚಿನದು. ರಚ್ಚೆಹಿಡಿದು ತಿಂಗಳಾಗುತ್ತ ಬಂತು ನಿಲ್ಲುವ